ಎಂ.ವಿ.ಸಿ - 589/2025
ಪಿ.ಡಬ್ಲ್ಯು - 01

**ದಿನಾಂಕ : 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ಚಲಾಯಿಸುತಿದ್ದ ವಾಹನ ನನಗೆ ಸೇರಿದ್ದು. ನಾನೇ ಹಿಂದಿನಿಂದ ಹೋಗಿ ಬಸ್ಸಿಗೆ ಡಿಕ್ಕಿಪಡಿಸಿದೆ ಎಂದರೆ ಸರಿ. ನಾನು ಬಸ್ಸಿಗೆ ಅಂತರ ಕಾಯ್ದುಕೊಳ್ಳದೇ ಬಸ್ಸಿಗೆ ಡಿಕ್ಕಿಪಡಿಸಿದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಬಸ್ಸಿನ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಈಗ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತದ ಸಮಯದಲ್ಲಿ ಆಟೋ ಎಲೆಕ್ಟ್ರಿಕ್ ಶಾಪ್ ನಲ್ಲಿ ಕೆಲಸ ಮಾಡುತಿದ್ದೆ . ಅದು ನನ್ನ ಸ್ವಂತ ಅಂಗಡಿ. ಅಲ್ಲಿ ನಾನು 3 ಜನರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದೆ. ಅಂಗಡಿ ಲೈಸೆನ್ಸ್ ಈಗಲೂ ಚಾಲ್ತಿಯಲ್ಲಿ ಇರುತ್ತದೆ . ಈಗ ನಾನು ಅಂಗಡಿಯನ್ನುಬೇರೆಯರಿಗೆ ನಡೆಸಲು ಕೊಟ್ಟಿರುತ್ತೇನೆ. ಹುಷಾರದ ನಂತರ ನಾನು ಪುನಃ ಅಂಗಡಿಯನ್ನು ನಡೆಸಬೇಕು ಎಂದು ಅಂದುಕೊಂಡಿದ್ದೇನೆ . ತಿಂಗಳಿಗೆ ನನಗೆ ರೂ 50000/- ಆದಾಯ ಇತ್ತು ಎನ್ನುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ಸಾಕ್ಷಿ ಮುಂದುವರಿದು ಎಲ್ಲಾದಾರೂ ಲಾರಿ ಕೆಟ್ಟು ಹೋದರೇ ನನಗೆ ಕರೆ ಮಾಡುತ್ತಾರೆ ಆಗ ನಾನು ಹೋಗಿ ಬ್ಯಾಟರಿ ರಿ ಚಾರ್ಜ್ ಮಾಡಿ ಲಾರಿಯನ್ನು ಚಲಾಯಿಸುವ ರೀತಿ ಮಾಡುತ್ತೇವೆ ಆಗ ನಮಗೆ ರೂ 1000 ರಿಂದ 1500 ಕೊಡುತ್ತಾರೆ , ಆಗ ನಾವು ಬಿಲ್ ಕೊಡುವುದಿಲ್ಲ ಎಂದು ತಿಳಿಸಿರುತ್ತಾರೆ . ಒಮ್ಮೆಮ್ಮೆ ನಮಗೆ ಜಾಸ್ತಿ ಸಂಪಾದನೆ ಆಗುತದೆ . ನಾನು 9 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನಮ್ಮ ರೇಶನ್ ಕಾರ್ಡ್

ಬಿಪಿಎಲ್ . ಆ ಕಾರಣದಿಂದ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನಾನು ದುಡಿಯಲು ಆಗ ತಾನೇ ಪ್ರಾರಂಭಿಸಿದ್ದೆ ಎಂದು ತಿಳಿಸಿರುತ್ತಾರೆ. ಅಪಘಾತದ ಗಾಯಗಳಿಂದಾಗಿ ನನಗೆ ಯಾವುದೇ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ .ಸಾಕ್ಷಿ ಮುಂದುವರಿದು ನೋವು ಇರುತ್ತದೆ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಕೇಸಿಗಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ದೈಹಿಕ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.